**ಕರ್ನಾಟಕ ಸರ್ಕಾರ**

**ಸಂ.ಇಡಿ 04 ಎಲ್‌ಸಿಇ 2002(ಎ)**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:21-5-2003 2007

**ಸುತ್ತೋಲೆ**

**ವಿಷಯ:** ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ನವೀಕರಿಸುವ ಬಗ್ಗೆ.

**ಉಲ್ಲೇಖ:** 1. ದಿನಾಂಕ:28-1-2003ರ ಸರ್ಕಾರ ಅಧಿಸೂಚನೆ ಸಂಖ್ಯೆ:ಇಡಿ 4 ಎಲ್‌ಸಿಇ 2002.
2. ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು-1 ಇವರ ಪತ್ರ ಸಂಖ್ಯೆ.ವಾ.ಶಿ.1/ಸ.ಶಿ.ಮು.ನೊಂ.ಮಾ.ನ.ವ. 49/2002-03,ದಿನಾಂಕ:7.4.2003, 25-11-2003 ಮತ್ತು 26-4-2005.

* * * *

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ-2 ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರೌಢ ಶಿಕ್ಷಣ ನಿರ್ದೇಶಕರು, ಸಮಗ್ರ ಶಿಕ್ಷಣ ಮಸೂದೆ 1983ರ ಅಡಿಯಲ್ಲಿ (ಆಕ್ಟ್-1) ಆಫ್ 1995) ವಾಣಿಜ್ಯ ನಿಯಮ 1999ನ್ನು ರೂಪಿಸಲಾಗಿರುವ ನಿಯಮದಲ್ಲಿ ವಾಣಿಜ್ಯ ಶಾಲೆಯ ಮಾನ್ಯತೆಯನ್ನು ನವೀಕರಿಸಲು ಅವಕಾಶವಿರುವುದಿಲ್ಲ. ಸಾಮಾನ್ಯ ಶಿಕ್ಷಣದಲ್ಲಿಯೂ ಶಾಲೆಗೆ 3 ವರ್ಷಗಳಿಗೊಮ್ಮೆ ಮಾನ್ಯತೆ ನವೀಕರಿಸುವ ಬಗ್ಗೆ ಸುತ್ತೋಲೆ ಹೊರಡಿಸಿರುತ್ತದೆ. ಉಲ್ಲೇಖ (1) ದಿನಾಂಕ:28-1-2003ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 4 ಎಲ್‌ಸಿಇ 2002 ರಲ್ಲಿ ಶಾಶ್ವತ ಮಾನ್ಯತೆ ಪಡೆದಿದ್ದರೆ ಮಾನ್ಯತೆ ನವೀಕರಿಸಿಕೊಳ್ಳುವ ಹಾಗಿಲ್ಲ. ವಾಣಿಜ್ಯ ಶಿಕ್ಷಣ ಮಂಡಳಿ ನಿರ್ಣಯದಂತೆ ವಾಣಿಜ್ಯ ಸಂಸ್ಥೆಗಳಿಗೆ 3 ವರ್ಷಗಳಿಗೊಮ್ಮೆ ಮಾನ್ಯತೆ ನವೀಕರಿಸಿಕೊಳ್ಳಬೇಕೆಂಬ ಬಗ್ಗೆ ವಾಣಿಜ್ಯ ಶಿಕ್ಷಣ ನಿಯಮ-8ಕ್ಕೆ ತಿದ್ದುಪಡಿ ತಂದು ಸರ್ಕಾರದ ಆದೇಶವನ್ನು ಹೊರಡಿಸುವಂತೆ ಪ್ರೌಢ ಶಿಕ್ಷಣ ನಿರ್ದೇಶಕರು ಕೋರಿರುತ್ತಾರೆ.

2. ಮೇಲಿನ ಪ್ರಸ್ತಾವನೆಯನ್ನು ಸರಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಸೂಚನೆಗಳನ್ನು ಈ ಮೂಲಕ ನೀಡಲಾಗಿದೆ.

1) ವಾಣಿಜ್ಯ ಶಿಕ್ಷಣ ಸಂಸ್ಥೆಗಳಿಗೆ ಮೊಟ್ಟ ಮೊದಲ ಬಾರಿ ಮಾನ್ಯತೆ ನೀಡುವ ಸಂದರ್ಭದಲ್ಲಿ ಅದನ್ನು ಕನಿಷ್ಟ 5 ವರ್ಷಗಳ ಅವಧಿಗೆ ಮಾತ್ರ ಎಂದು ನೀಡತಕ್ಕದ್ದು. ತದನಂತರ, ಪ್ರತಿ ಐದು ವರ್ಷಗಳ ಅವಧಿಗೊಮ್ಮೆ ಪರಿಶೀಲಿಸಿ ಅದನ್ನು ನವೀಕರಿಸತಕ್ಕದ್ದು.

SO ADULT

2) ಮೇಲಿನ ಸೂಚನೆಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳು, ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಅದನ್ನು ಉಲ್ಲಂಘಿಸಿ, ಸಕ್ಷಮ ಪ್ರಾಧಿಕಾರಗಳು ಮಾನ್ಯತೆಯನ್ನು ಪ್ರತಿ ವರ್ಷ ಅಥವಾ ಐದು ವರ್ಷಗಳಿಗಿಂತ ಕಡಿಮೆ ಅವಧಿಗಾಗಿ ಮಾನ್ಯತೆಯನ್ನು ನವೀಕರಿಸುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ಅದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಸುತ್ತೋಲೆಯಲ್ಲಿ ಒಳಗೊಂಡ ಸೂಚನೆಗಳಿಗೆ ರಾಜ್ಯಾದ್ಯಂತ ಪ್ರಚಾರ ಕೊಡಬೇಕು. ಹಾಗೂ ಇದನ್ನು ಶಿಕ್ಷಣ ವಾರ್ತೆಯಲ್ಲಿಯೂ ಪ್ರಕಟಿಸತಕ್ಕದ್ದು. ಸಂಬಂಧಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಈ ಸುತ್ತೋಲೆಯನ್ನು ಅವರವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾಣಿಜ್ಯ ಶಿಕ್ಷಣ ಸಂಸ್ಥಾ ಮುಖ್ಯಸ್ಥರುಗಳ ಗಮನಕ್ಕೆ ತರತಕ್ಕದ್ದು.

**(ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಅನುಮೋದಿಸಲ್ಪಟ್ಟಿರುತ್ತದೆ).**

(ಎಂ. ಎನ್. ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರು ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಸೇವೆಗಳು-3 ಶಾಖೆಗೆ ಒದಗಿಸಬೇಕೆಂದು ಕೋರಿದೆ.

ಪ್ರತಿ:-

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು--1(ಪ್ರೌಢಶಿಕ್ಷಣ).
2. ನಿರ್ದೇಶಕರು, ಸಾ.ಶಿ.ಇ. ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು--1.
3. ನಿರ್ದೇಶಕರು(ಇತರೆ ಪರೀಕ್ಷೆಗಳು)ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,3ನೇ ಕ್ರಾಸ್, ಮಲ್ಲೇಶ್ವರಂ,ಬೆಂಗಳೂರು-560 003.
4. ಮಾನ್ಯ ಪ್ರಾಥಮಿಕ ಮತ್ತ ಪ್ರೌಢಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿ.
5. ಕಾರ್ಯದರ್ಶಿ, ಪ್ರಾಥಮಿಕ, ಪ್ರೌಢಶಿಕ್ಷಣ ಇಲಾಖೆಯವರ ಆಪ್ತಕಾರ್ಯದರ್ಶಿ.
6. ಎಲ್ಲಾ ಸಹ/ಉಪ/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು, ಶಿಕ್ಷಣ ಇಲಾಖೆ.
7. ಶಾ.ಖಾ ರಕ್ಷಾ ಕಡತ.
8) ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರ**

**ಸಂ.ಇಡಿ 06 ಎಲ್‌ಸಿಇ 2007**

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12-03-2008

**ತಿದ್ದುಪಡಿ**

ದಿನಾಂಕ:21-05-2007ರ ಸುತ್ತೋಲೆ ಸಂಖ್ಯೆ: ಇಡಿ 4 ಎಲ್‌ಸಿಇ 2002(ಎ)ರ ಕಂಡಿಕೆ-2ರ ಉಪ ಕಂಡಿಕೆ:1ರ ಬದಲಾಗಿ ಈ ಕೆಳಕಂಡಂತೆ ಸೇರ್ಪಡಿಸಿ ಓದತಕ್ಕದ್ದು.

1) ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಹಾಗೂ ಹೊಸ ನೋಂದಣಿ, ಮಾನ್ಯತೆ ಪಡೆದಿರುವ ವಾಣಿಜ್ಯ ಶಿಕ್ಷಣ ಸಂಸ್ಥೆಗಳಿಗೆ ಮೊಟ್ಟ ಮೊದಲ ಬಾರಿ ಮಾನ್ಯತೆ ನೀಡುವ ಸಂದರ್ಭದಲ್ಲಿ ಅದನ್ನು ಕನಿಷ್ಠ 5 ವರ್ಷಗಳ ಅವಧಿಗೆ ನೀಡತಕ್ಕದ್ದು. ಪ್ರತಿ ಐದು ವರ್ಷಗಳ ಅವಧಿಗೊಮ್ಮೆ ಪರಿಶೀಲಿಸಿ, ಅದನ್ನು ನವೀಕರಿಸತಕ್ಕದ್ದು.

Commerce 17/3

(ಎಂ.ಎನ್. ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

87/12 17.3.08

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಸೇವೆಗಳು-3 ಶಾಖೆಗೆ ಒದಗಿಸಬೇಕೆಂದು ಕೋರಿದೆ.

162/2011-12 21.03.2012

ಪ್ರತಿ:-

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-1.
2. ನಿರ್ದೇಶಕರು, (ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-1.
3. ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 3ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 003.
4. ಘನತೆವೆತ್ತ ರಾಜ್ಯಪಾಲರ ಸಲಹೆಗಾರರ ಆಪ್ತ ಕಾರ್ಯದರ್ಶಿಗಳು (ಶಿಕ್ಷಣ ಇಲಾಖೆ).
5. ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ರವರ ಆಪ್ತಕಾರ್ಯದರ್ಶಿ, ಶಿಕ್ಷಣ ಇಲಾಖೆ.
6. ಎಲ್ಲಾ ಸಹ/ಉಪ/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು, ಶಿಕ್ಷಣ ಇಲಾಖೆ.
7. ಶಾಖಾ ರಕ್ಷಾ ಕಡತ.
8. ಹೆಚ್ಚಿನ ಪ್ರತಿಗಳು.